ಸಾಕ್ಷಿಯನ್ನು ದಿಃ.11.01.2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಟಿ ಎಸ್ ಆರ್ ರವರಿಂದ

ನಾವು ಆರು ಜನ ಅಣ್ಣ ತಮ್ಮಂದಿರು. ದೇವಪ್ಪ, ಸುಬ್ರಾಯ ನನ್ನ ಅಣ್ಣ. ಅವರಿಬ್ಬರು ಒಟ್ಟು ಕುಟುಂಬದಿಂದ ಹಿಸ್ಸೆ ಆಗಿ ಹೋಗಿರುತ್ತಾರೆ. ಯಾವ ದಿನಾಂಕ ಎಂದು ನನೆಪಿರುವುದಿಲ್ಲ. ಬಹಳ ಹಿಂದೆಯೇ ಹಿಸ್ಸೆ ಆಗಿ ಹೋಗಿರುತ್ತಾರೆ. 1980 ರಲ್ಲಿ ಮತ್ತೊಬ್ಬರು ಸಹೋದರರಾದ ತಿಮ್ಮಪ್ಪ ಹಿಸ್ಸೆ ಪಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ದಿಃ 22.09.1988 ರಲ್ಲಿ ನನಗೆ ಸ್ವಲ್ಪ ಒಟ್ಟು ಕುಟುಂಬದ ಆಸ್ತಿಯನ್ನು ಜೀವನಾಂಶಕ್ಕಾಗಿ ಕೋಟ್ಟಿರುತ್ತಾರೆ. ಹಿಸ್ಸೆಯಾಗಿ ಕೊಟ್ಟಿರುವುದಿಲ್ಲ. ಈ ವಿಚಾರವನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಪ್ಯಾರಾ ನಂ. 2 ರಲ್ಲಿ ನಮೂದು ಮಾಡಿದಂತೆ ದಿಃ 22.09.1988 ರ ಹಿಸ್ಸೆ ಪತ್ರದ ಪ್ರಕಾರ ನನಗೆ ಸ. ನಂ. 9/2 ಹಾಗೂ ಖಾ.ನಂ.39 ರಲ್ಲಿ ಆಸ್ತಿ ಬಂದಿದೆ ಎಂದರೆ ಸರಿ. ನಾನು 22.09.1988 ರಲ್ಲಿ ಒಟ್ಟು ಕುಟುಂಬದ ಆಸ್ತಿಯಿಂದ ಬರಬೇಕಾದ ಹಿಸ್ಸೆಯನ್ನು ಪಡೆದುಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಪ್ರತ್ಯೇಕವಾಗಿ ವಾಸವಾಗಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನನ್ನ ಅಣ್ಣಂದಿರು ಹಾಗೂ ನನ್ನ ಕೊನೆಯ ತಮ್ಮ ಕೂಡ ಒಬ್ಬಬ್ಬರಾಗಿ ಹಿಸ್ಸೆ ಆಗುತ್ತಾ ಬಂದಿರುತ್ತಾರೆ ಎಂದರೆ ಸರಿ. ಹಾಗಾಗಿ 22.09.1988 ರಂದು ನಾನು ನನಗೆ ಬರಬೇಕಾದ ಸಂಪೂರ್ಣ ಹಿಸ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಸ.ನಂ. 88 ಅಂದರೆ ಹಳೆ ಸ.ನಂ. 14 ರ ಆಸ್ತಿ ಇನ್ನು ಭಾಗವಾಗಿಲ್ಲ ಎಂದು ಉತ್ತರಿಸುತ್ತಾರೆ.

ಪ್ರತಿವಾದಿ ನನ್ನ ತಮ್ಮ. ನಾನು ಮತ್ತು ನನ್ನ ಸಹೋದರರು ಹಿಸ್ಸೆ ಪಡೆದುಕೊಂಡು ಹೋದ ಬಳಿಕ ನನ್ನ ತಂದೆ ಮತ್ತು ಪ್ರತಿವಾದಿ ಮಾತ್ರ ಒಟ್ಟು ಕುಟುಂಬದ ಸದಸ್ಯರಾಗಿದ್ದಾರೆ ಎಂದರೆ ಸರಿ. ಸ.ನಂ. 88 ನನ್ನ ತಂದೆಗೆ ಮಂಜೂರಾದ ಸ್ವತ್ತು ಎಂದರೆ ಸರಿ. ಸ. ನಂ.88 ಅನ್ನು ನನ್ನ ತಂದೆ ಪ್ರತಿವಾದಿಗೆ ಮರಣಶಾಸನ ಮಾಡಿದ್ದು ಈ ಪ್ರಯುಕ್ತ ನನ್ನ ಮತ್ತು ಉಳಿದ ಸಹೋದರರ ಮೇಲೆ ಓಎಸ್ ನಂ. 220/2002 ರಂತೆ ಸಿವಿಲ ದಾವೆಯನ್ನು ಸಲ್ಲಿಸಿದ್ದರೆ ಎಂದರೆ ಸರಿ. ಸಾಕ್ಷಿ ಮುಂದುವರೆದ ನನ್ನ ಮೇಲೆ ಸಲ್ಲಿಸಿದ್ದರು, ಉಳಿದ ಸಹೋದರರ ಮೇಲೇ ಸಲ್ಲಿಸಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾವೆ

ಪ್ರತಿವಾದಿಯ ಪರವಾಗಿ ತೀರ್ಮಾನವಾಗಿರುತ್ತದೆ ಎಂದರೆ ಸರಿ. ಈ ಬಗ್ಗೆ ನಾನು ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಅದು ವಜಗೊಂಡಿರುತ್ತದೆ ಎಂದರೆ. ಅದರ ಮೇಲೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮವಿಯನ್ನು ಸಲ್ಲಿಸಿದ್ದೇನೆ.

ನನ್ನ ತಂದೆ ಮತ್ತು ಪ್ರತಿವಾದಿ ದಿಃ 09.08.1990 ರಂದು ಅವರಿಬ್ಬರ ನಡುವೆ ಹಿಸ್ಸೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಪಾಲು ಪತ್ರದ ಪ್ರಕಾರ ಸ. ನಂ. 9/2 ರ ಉತ್ತರದ 5 1/2 ಗುಂಟೆಯನ್ನು ನನ್ನ ತಂದೆಯ ಜೀವನಾಂಶಕ್ಕಾಗಿ ಬಿಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸ.ನಂ. 9/2 ರಲ್ಲಿ 8 ಗುಂಟೆ ಭಾಗಾಯ್ತು ಹಾಗೂ ಉತ್ತರ ದಿಕ್ಕಿನ 5 1/2 ಗುಂಟೆ ಹಾಗೂ ಸ.ನಂ. 7/1 ರ ಪೈಕಿ 13 ಗುಂಟೆ ಬಾಗಾಯ್ತು ಪ್ರತಿವಾದಿಯರ ಸ್ವಾಧಿನದಲ್ಲಿದೆ ಎಂದರೆ ಸರಿ. ದಾವಾ ಐಟಂ ನಂ.4 ಪ್ರತಿವಾದಿ ವಾಸವಾಗಿರುವ ಮನೆ ಎಂದರೆ ಸರಿ. ನಾನು ಕಟ್ಟಿಕೊಂಡಿರುವ ಮನೆಯ ದಕ್ಷಿಣ ದಿಕ್ಕಿನಲ್ಲಿ ಐಟಂ ನಂ.4 ಪ್ರತಿವಾದಿ ಮನೆ ಬರುತ್ತದೆ. ದಾವಾ ಐಟಂ ನಂ. 4 ರ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ನನ್ನ ಮನೆ ಬರುತ್ತದೆ ಎಂದರೆ ಸರಿ.

ದಿಃ 09.08.1990 ರ ಪಾಲು ಪತ್ರದ ಪ್ರಕಾರ ಸ. ನಂ. 9/2 ರಲ್ಲಿ 8 ಗುಂಟೆ ಬಾಗಾಯ್ತು, ಸ.ನಂ. 7/1 ರ ಪೈಕಿ 13 ಗುಂಟೆ ಬಾಗಾಯ್ತು ಮತ್ತು ದಾವಾ ಐಟಂ ನಂ. 4 ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸ. ನಂ. 9/2 ರಲ್ಲಿ ನನ್ನ ತಂದೆಯ ಜೀವನಾಂಶಕ್ಕಾಗಿ ಬಿಟ್ಟಿದಂತಹ ಉತ್ತರ ದಿಕ್ಕಿನ 5 1/2 ಗುಂತೆ ನನ್ನ ತಂದೆಯ ಮರಣಾನಂತರ ಪ್ರತಿವಾದಿಗೆ ಸೇರಬೇಕೆಂದು ನನ್ನ ತಂದೆ ಹಾಗೂ ಪ್ರತಿವಾದಿಯ ನುಡುವೆ ಒಪ್ಪಂದ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಐಟಂ ನಂ. 1 ಮೊದಲು ನಮ್ಮ ಸ್ವಾಧೀನದಲ್ಲಿತ್ತು, ಈಗ ಪ್ರತಿವಾದಿ ಬೇಲು ಹಾಕಿಕೊಂಡು ತಾನು ಸ್ವಾದೀನಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕಾಗಲೀ, ಸ್ವಾದೀನವಾಗಲಿ ಇಲ್ಲ ಎಂದರೆ ಸಾಕ್ಷಿ ಮೊದಲು ಇತ್ತು ಎಂದು ಉತ್ತರಿಸುತ್ತಾರೆ. ಪ್ರತಿವಾದಿ ನನ್ನ ತಂದೆ ಎಂದು ಕೊನೆ ಕಾಲದವರೆಗೂ ನೋಡಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ತಂದೆ ಸಾಯುವಾಗ ಅವರಿಗೆ 98 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಐಟಂ ನಂ. 1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಪ್ರಿತ್ರಾರ್ಜಿತ ಆಸ್ತಿ. ಪ್ರತಿವಾದಿಯು ದಾಖಲಿಸಿದ ಅಸಲು ದಾವೆಯಲ್ಲಿ ಐಟಂ ನಂ. 1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ತೀರ್ಮಾನ ಆಗಿದೆ ಹಾಗೂ ವಿಲ್ ರುಜುವಾತು ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಿಲ್ ನ ದಾವೆಯಲ್ಲಿ ವಕೀಲರ

ಮುಖಾಂತರ ನಾನು ಹಾಜರಾಗಿದ್ದೆ  ಎಂದರೆ ಸರಿ. ನಾನು ವಿಲ್ ದಾವೆಯಲ್ಲಿ   ಐಟಂ ನಂ. 1 ಅನ್ನು ಪ್ರಿತ್ರಾರ್ಜಿತ ಆಸ್ತಿ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ನಾನು ಹೇಳಿರುತ್ತೇನೆ ಆದರೆ ವಕೀಲರು ನ್ಯಾಯಾಲಯದಲ್ಲಿ ಹೇಳಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ